ಅ) ಚಿಂತಾಮಣಿ ನಗರದಲ್ಲಿ ಸರ್ಕಾರಿ ಮಹಾತ್ಮಗಾಂಧಿ ಬಾಲಕರ ಪ್ರೌಢಶಾಲೆಗೆ ಪದವಿ ಪೂರ್ವ ಕಾಲೇಜು ತೆರೆಯಲು ಅನುಮತಿ ಕೊಟ್ಟಿರುವುದು ನಿಜವೆ?

ಆ) ಪದವಿ ಪೂರ್ವ ಕಾಲೇಜಿಗೆ ಬೇಕಾದ ಕಟ್ಟಡ, ಪ್ರಯೋಗಾಲಯಗಳು ಮತ್ತು ಸಿಬ್ಬಂದಿ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸರಿಯಾದ ರೀತಿಯಲ್ಲಿ ಸೌಲಭ್ಯಗಳನ್ನು ನೀಡಲು ಕ್ರಮ ತೆಗೆದುಕೊಳ್ಳಲಾಗುವುದೆ?

ಈ) ಈಗ ಹಾಲಿ ಇರುವ ಹುಡುಗರ ಸಂಖ್ಯೆ ಎಷ್ಟು ಇದಕ್ಕೆ ತಕ್ಕಂತೆ ಸಿಬ್ಬಂದಿ ವರ್ಗ, ಕಟ್ಟಡ ಮತ್ತು ಪ್ರಯೋಗಾಲಯ ಇದೆಯೇ ಇಲ್ಲದೇ ಇದ್ದ ಪಕ್ಷದಲ್ಲಿ ಎಷ್ಟು ದಿನಗಳೊಳಗಾಗಿ ಒದಗಿಸಲಾಗುವುದು?

ಶ್ರೀ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು) :

ಅ) ಹೌದು.

ಆ) ಸದರಿ ಪದವಿ ಪೂರ್ವ ಕಾಲೇಜನ್ನು ಇತರೆ ಸಂಯುಕ್ತ ಕಾಲೇಜುಗಳಂತೆ ಪ್ರೌಢಶಾಲಾ ಕಟ್ಟಡದಲ್ಲಿ ನಿರ್ವಹಿಸಲಾಗುತ್ತಿದೆ. ಕಟ್ಟಡದ ಕೊರತೆಯಿರುತ್ತದೆ. ಇದಕ್ಕೆ ಹೆಚ್ಚುವರಿ ಕೊಠಡಿಗಳ ನಿರ್ಮಾಣದ ಅಗತ್ಯವಿದೆ. ಪ್ರಯೋಗಾಲಯಕ್ಕೆ ಅಗತ್ಯವಾದ ಸಲಕರಣೆಗಳನ್ನು ಪ್ರಸಕ್ತ ವರ್ಷವೇ ಪೂರೈಸಲಾಗುತ್ತಿದೆ. ಬಹುತೇಕ ಸಿಬ್ಬಂದಿಯನ್ನು ಈಗಾಗಲೇ ನೇಮಿಸಲಾಗಿದೆ. ಉಳಿದ ಸಿಬ್ಬಂದಿಯನ್ನು ನೇಮಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಹಂತ ಹಂತವಾಗಿ ಸೌಲಭ್ಯಗಳನ್ನು ನೀಡಲು ಕ್ರಮ ತೆಗೆದುಕೊಳ್ಳಲಾಗುವುದು

ಈ) ಪ್ರಸಕ್ತ ವರ್ಷ ಪ್ರಥಮ ಪಿ ಯು ಸಿ ಯಲ್ಲಿ 520 ದ್ವಿತೀಯ ಪಿಯುಸಿಯಲ್ಲಿ 100 ವಿದ್ಯಾರ್ಥಿಗಳು ಇರುತ್ತಾರೆ. ಸದರಿ ಪದವಿ ಪೂರ್ವ ಕಾಲೇಜನ್ನು ಇತರೆ ಸಂಯುಕ್ತ ಕಾಲೇಜಗಳಂತೆ ಪ್ರೌಢಶಾಲಾ ಕಟ್ಟಡಗಳಲ್ಲಿ ನಿರ್ವಹಿಸಲಾಗುತ್ತಿದೆ. ಕಟ್ಟಡದ ಕೊರತೆಯಿರುತ್ತದೆ. ಇದಕ್ಕೆ ಹೆಚ್ಚುವರಿ ಕೊಠಡಿಗಳ ನಿರ್ಮಾಣದ ಅಗತ್ಯವಿದೆ. ಪ್ರಯೋಗಾಲಯಕ್ಕೆ ಅಗತ್ಯವಾದ ಸಲಕರಣೆಗಳನ್ನು ಪ್ರಸಕ್ತ ವರ್ಷವೇ ಪೂರೈಸಲಾಗುತ್ತಿದೆ. ಬಹು ತೆಸಿಕ ಸಿಬ್ಬಂದಿಯನ್ನು ಈಗಾಗಲೇ ನೇಮಿಸಲಾಗಿದೆ. ಉಳಿದ ಸಿಬ್ಬಂದಿಯನ್ನು ನೇಮಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಚಿಂತಾಮಣಿ ಕ್ಷೇತ್ರದಲ್ಲಿ ಗ್ರಾಮಾಂತರ ರಸ್ತೆಗಳ ಡಾಂಬರೀಕರಣ

57 (116) - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯತ್ ಮತ್ತು ಬೇರೆ ಯೋಜನೆಗಳಿಂದ ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಚಿಂತಾಮಣಿ ಮತ್ತು ಬಾಗೇಪಲ್ಲಿ ತಾಲ್ಲೂಕಿಗೆ ಸೇರಿದ ಚೇಳೂರು ಹೋಬಳಿಯಲ್ಲಿ ಗ್ರಾಮಾಂತರ ರಸ್ತೆಗಳು ಎಷ್ಟು ಕಿಲೋ ಮೀಟರ್ ಡಾಂಬರೀಕರಣ ಮಾಡಲಾಗಿದೆ;

ಅ) ಈ ರೀತಿ ಡಾಂಬರೀಕರಣ ಮಾಡಿರುವ ರಸ್ತೆಯ ಇಕ್ಕೆಲಗಳಲ್ಲಿ ಕಾಲುವೆಗಳು ಮಾಡದೆ ಮಳೆಗಾಲದಲ್ಲಿ ನೀರು ನಿಂತು ಅನೇಕ ಭಾಗಗಳಲ್ಲಿ ರಸ್ತೆಗಳಲ್ಲಿ ಹಳ್ಳಕೊಳ್ಳಗಳಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಗ್ರಾಮಾಂತರ ರಸ್ತೆಗಳ ವಾರ್ಷಿಕ ದುರಸ್ತಿಗಾಗಿ ಜಿಲ್ಲಾ ಪಂಚಾಯತ್‌ನಿಂದ ಅಥವಾ ಬೇರೆ ಇಲಾಖೆಗಳಿಂದ ಹಣ ನಿಗಧಿ ಮಾಡಲಾಗಿದೆಯೇ; 1999-2000 ರಲ್ಲಿ ಮತ್ತು 2000-2001 ರಲ್ಲಿ ಎಷ್ಟು ಹಣ ರಸ್ತೆ ದುರಸ್ತಿಗಾಗಿ ಉಪಯೋಗಿಸಲಾಗಿದೆ ಎಂಬುದರ ವಿವರಗಳನ್ನು ತಿಳಿಸುವುದು?

ಶ್ರೀ ಎಂ.ವೈ. ಪೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಜಿಲ್ಲಾ ಪಂಚಾಯತ್ ಅನುದಾನದಿಂದ ಚಿಂತಾಮಣಿ ಮತ್ತು ಬಾಗೇಪಲ್ಲಿ ತಾಲ್ಲೂಕಿಗೆ ಸೇರಿದ ಚೇಳೂರುನ ಹೋಬಳಿಯಲ್ಲಿ ಕ್ರಮವಾಗಿ 158 73 ಕಿ.ಮೀ ಮತ್ತು 20 ಕಿ.ಮೀ.ನಷ್ಟು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಗ್ರಾಮಾಂತರ ರಸ್ತೆಗಳಿಗೆ ಡಾಂಬರೀಕರಣ ಮಾಡಲಾಗಿದೆ.

ಆ) ಸರ್ಕಾರದ ಗಮನಕ್ಕೆ ಬಂದಿದೆ. ಅನುದಾನದ ಲಭ್ಯತೆಗನುಗುಣವಾಗಿ ಆದ್ಯತೆ ಮೇರೆಗೆ ಈ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿರುತ್ತದೆ.

ಇ) ಜಿಲ್ಲಾ ಪಂಚಾಯತ್‌ನಿಂದ ಮಾತ್ರ ಗ್ರಾಮಾಂತರ ರಸ್ತೆಗಳ ದುರಸ್ತಿಗೆ ಹಣ ನಿಗಧಿ ಪಡಿಸಲಾಗಿದೆ.

1999-2000ರಲ್ಲಿ ರೂ. 7.50 ಲಕ್ಷಗಳು ನಿಗಧಿಪಡಿಸಿ, ರೂ. 7.15 ಲಕ್ಷಗಳು ಖರ್ಚಾಗಿರುತ್ತದೆ. ಮತ್ತು 2000-01ರಲ್ಲಿ ರೂ. 8.64 ಲಕ್ಷಗಳು ನಿಗಧಿಪಡಿಸಿ, ರೂ. 8.30 ಲಕ್ಷಗಳು ಖರ್ಚಾಗಿರುತ್ತದೆ.

ರಾಜೀವಗಾಂಧಿ ವಸತಿ ಯೋಜನೆ ಫಲಾನುಭವಿಗಳಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ

58 (60) - ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜೀವ್ ಗಾಂಧಿ ವಸತಿ ಯೋಜನೆಯ ಫಲಾನುಭವಿಗಳಿಗೆ ರಿಜಿಸ್ಟ್ರೇಷನ್ ಮಾಡುವ ಸಂದರ್ಭದಲ್ಲಿ ಸಕ್ಷಿಗಳ ಅಗತ್ಯ ಇದೆಯೇ? ಇದ್ದಲ್ಲಿ ಅವರ ಎರಡು ಫೋಟೋದ ಅಗತ್ಯ ಇದೆಯೇ;

ಆ) ಇದರಿಂದ ಜನಸಾಮಾನ್ಯರಿಗೆ ತೊಂದರೆ ಹಾಗೂ ಖರ್ಚು ಆಗುವುದು ಸರಕಾರದ ಗಮನಕ್ಕೆ ಬಂದಿದೆಯೇ? ಇದಕ್ಕೆ ಸೂಕ್ತ ತಿದ್ದುಪಡಿ ಮಾಡಬಹುದೇ?

ಶ್ರೀ ಸಗೀರ್ ಅಹಮದ್ (ವಸತಿ ಸಚಿವರು) :

ಅ) ಸಾಕ್ಷಿಗಳ ಅಗತ್ಯವಿದೆ.

ಫೋಟೋಗಳ ಅಗತ್ಯವಿಲ್ಲ.